# ಸಂತಸದ ಹೂವು ಅರಳುವ ಸಮಯ



## ದಾರಿ ನೂರಾರು ಬೆಳಕಿನ ಕಡೆಗೆ

ಹೊಸ ವರುಷ, ಹೊಸ ಹರುಷದ ಸಮಯ. ಹಳೆಯ ವರ್ಷದ ಏನೆಲ್ಲ ಗಾಸಿಗಳನ್ನು ಮರೆಸಿ, ಹೊಸ ಕನಸುಗಳನ್ನು ಕರುಣಿಸುವ ಶಕ್ತಿ ಹೊಸ ವರ್ಷವೆಂಬ ಕಾಲಬಿಂದುವಿಗಿದೆ. ಈ ಕನಸುಗಳು ಹೇಗೆಲ್ಲ ಇರಬಲ್ಲವು? ಉತ್ತರ ರೂಪದಂತಿರುವ ಇಲ್ಲಿನ ಮೂರು ಲೇಖನಗಳು, ಹತ್ತಾರು ಟಿಪ್ಪಣಿಗಳು ನಮ್ಮ ಚಿಂತನಾಕ್ರಮವನ್ನು ವ್ಯಕ್ತಿಯಿಂದ ಸಮಷ್ಟಿಯ ನೆಲೆಗೆ ವಿಸ್ತರಿಸುವ ಹಂಬಲ ಹೊಂದಿವೆ; ಆ ಮೂಲಕ ಹೊಸ ವರ್ಷದ ನಮ್ಮ ಬಯಕೆ-ಸಂಕಲ್ಪಗಳನ್ನು ಸಮಾಜಮುಖಿಗೊಳಿಸುವ ಉದ್ದೇಶ ಹೊಂದಿವೆ.